"ಮಧುರ ಮಕ್ಕಳೇ - ಸಂಗಮಯುಗದಲ್ಲಿ ನಿಮಗೆ ಬೇಹದ್ದಿನ ತಂದೆ ಸಿಕ್ಕಿದ್ದಾರೆ, ನೀವು ಪರಸ್ಪರ ಸಹೋದರ-ಸಹೋದರಿ ಆಗಿದ್ದೀರಿ, ನೀವು ತಂದೆಯಿಂದ ಆಸ್ತಿ ತೆಗೆದುಕೊಳ್ಳಬೇಕಾಗಿದೆ"

ಪ್ರಶ್ನೆ: ತಂದೆಯ ಯಾವ ಶ್ರೀಮತದಿಂದ ಪ್ರತಿ ಒಂದು ವಸ್ತುವನ್ನು ಕಲ್ಲಿನಿಂದ ಚಿನ್ನವನ್ನಾಗಿ (ಪತ್ತರ್ ಸೆ ಪಾರಸ್) ಮಾಡಲು ಸಾಧ್ಯವಿದೆ?

ಉತ್ತರ: ತಂದೆಯ ಶ್ರೀಮತವಾಗಿದೆ-ಮಕ್ಕಳೇ ನಿಮ್ಮ ಬಳಿ ಏನೆಲ್ಲಾ ಇದೆಯೋ ಅದನ್ನು ಈಶ್ವರೀಯ ಬ್ಯಾಂಕ್ ನಲ್ಲಿ ಜಮಾ ಮಾಡಿ. ಆಗ ಅದು ಕಲ್ಲಿನಿಂದ ಚಿನ್ನವಾಗಿ ಬಿಡುತ್ತದೆ. ತಂದೆ ಕೊಡುವಂತಹ ದಾತ ಆಗಿದ್ದಾರೆ. ಅವರು ನಿಮ್ಮಿಂದ ಏನನ್ನೂ ಸಹ ತೆಗೆದುಕೊಳ್ಳುವುದಿಲ್ಲ, ಆದರೆ ನಿಮ್ಮ ಬಳಿ ಏನೆಲ್ಲ ಅಧಿಕವಾಗಿದೆ ಅದನ್ನು ಸಫಲ ಮಾಡಿಕೊಳ್ಳಿ. ಯಾರಿಂದಲೂ ಸಾಲ ಮುಂತಾದುಗಳನ್ನು ತೆಗೆದುಕೊಳ್ಳಬಾರದು.

ಗೀತೆ: ನೀನು ರಾತ್ರಿಯನ್ನು ನಿದ್ರೆ ಮಾಡಿ ಕಳೆದೆ.........

ಓಂ ಶಾಂತಿ. ಈ ಗೀತೆಯನ್ನು ಕೇಳಿದಿರಿ. ಇಂತಹ ಒಳ್ಳೊಳ್ಳೆಯ ಗೀತೆಗಳನ್ನು ಸೇವಾಕೇಂದ್ರಗಳಲ್ಲಿ ಇಟ್ಟುಕೊಳ್ಳಬೇಕಾಗಿದೆ. ಈ ಗೀತೆಯನ್ನು ತಂದೆ ಮಾಡಿಸಿದ್ದಾರೆ. ನಿಮ್ಮ ಬುದ್ಧಿಯಲ್ಲಿ ಬೇರೆ ಯಾವುದೇ ಶಾಸ್ತ್ರ ಮುಂತಾದವುಗಳಿಲ್ಲ. ನೀವು ಅದೆಲ್ಲವನ್ನು ಓದಿದ್ದೀರಿ ಹಾಗೂ ಅವುಗಳನ್ನು ನೀವು ತಿಳಿದುಕೊಂಡಿದ್ದೀರಿ. ಆದರೇ ಈಗ ನಿಮ್ಮ ಬುದ್ಧಿಯಿಂದ ಅವುಗಳನ್ನು ಮರೆತಿದ್ದೀರಿ. ತಂದೆಯು ಸಹ ಈ ಎಲ್ಲವುಗಳನ್ನು ಮರೆಯಬೇಕೆಂದು ತಿಳಿಸುತ್ತಿದ್ದಾರೆ. ಭಕ್ತಿ ಮಾರ್ಗದಲ್ಲಿ ಓದಿರುವ ಎಲ್ಲಾ ಶಾಸ್ತ್ರಗಳನ್ನು ಮರೆಯಬೇಕಾಗಿದೆ. ತಾವು ಸತ್ತರೆ ತಮ್ಮ ಪಾಲಿಗೆ ಪ್ರಪಂಚವೇ ಸತ್ತಂತೆ. ನಾನು ಆತ್ಮನಾಗಿದ್ದೇನೆ, ಈಗ ಮನೆಗೆ ಹೋಗಬೇಕಾಗಿದೆ ಎಂದು ನೆನಪಿಟ್ಟೆಕೊಳ್ಳಬೇಕು. ಏಕೆಂದರೆ ಈ ವಿದ್ಯೆ ನಮ್ಮ ಜೊತೆಯಲ್ಲಿ ಬರುತ್ತದೆ. ಇದು ಅಮರಲೋಕಕ್ಕಾಗಿ ಅಮರ ಕಥೆಯಾಗಿದೆ. ನಮ್ಮ ತಂದೆಯೂ ಸಹ ಅಮರನಾಥನಾಗಿದ್ದಾರೆ. ನಾವು ಎಲ್ಲರು ಪಾರ್ವತಿಯರಾಗಿದ್ದೇವೆ. ಶಿವ ತಂದೆಯಿಂದ ಅಮರ ಕಥೆ ಕೇಳುತ್ತಿದ್ದೇವೆ. ಅವರು ಶ್ರೇಷ್ಠಾತಿ ಶ್ರೇಷ್ಠ ಅಮರನಾಥ ಶಿವ ತಂದೆಯಾಗಿದ್ದಾರೆ. ಅಮರನಾಥದಲ್ಲಿ ಕೇವಲ ಹಿಮದ ಲಿಂಗವನ್ನು ಮಾಡಿ ಪೂಜಿಸುತ್ತಾರೆ. ಈಗ ನಿರಾಕಾರನಿಗೆ ಪೂಜೆ ಮಾಡಲು ಸಾಧ್ಯವಿದೆಯೇ? ಉಳಿದಂತೆ ತಾನೇ ತಾನಾಗಿ ಶಿವಲಿಂಗ ಉದ್ಭವಿಸುವುದಿಲ್ಲ. ಪೂಜಾರಿಗಳೇ ಸ್ವಯಂ ಮಾಡುತ್ತಾರೆ. ಆದರೆ ಸುಳ್ಳಾಗಿ ಕಥೆಗಳನ್ನು ಹೇಳುತ್ತಾರೆ. ಅಮರನಾಥ ಅಥವಾ ಶಂಕರ ಪಾರ್ವತಿ ಅಲ್ಲಿಗೆ ಎಲ್ಲಿಂದ ಬರುತ್ತಾರೆ. ಅಲ್ಲಿ ಯಾವ ಮಾನಸ ಸರೋವರವು ಸಹ ಇಲ್ಲ. ಸತ್ಯ-ಸತ್ಯವಾದ ಮಾನಸ ಸರೋವರ ಈ ಬ್ರಹ್ಮಾ ಆಗಿದ್ದಾರೆ. ನಿರಾಕಾರ ಶಿವ ತಂದೆ ಜ್ಞಾನ ಸಾಗರ ಆಗಿದ್ದಾರೆ, ಅವರು ಎಲ್ಲಿಯವರೆಗೆ ಇವರ ಶರೀರದಲ್ಲಿ ಪ್ರವೇಶ ಮಾಡುವುದಿಲ್ಲ ಅಲ್ಲಿಯವರೆಗೆ ಅವರು ಮಾನಸ ಸರೋವರ ಹೇಗೆ ಆಗುತ್ತಾರೆ. ಆತ್ಮನಲ್ಲಿ ಜ್ಞಾನವಿದೆ ಆದರೆ ಹೇಗೆ ಹೇಳುವುದು? ಎಲ್ಲಿಯವರೆಗೆ ಮನುಷ್ಯರ ಶರೀರವನ್ನು ತೆಗೆದುಕೊಳ್ಳುವುದಿಲ್ಲ ಅಲ್ಲಿಯವರೆಗೆ ಅವರು ಜ್ಞಾನ ಹೇಳಲು ಆಗುವುದಿಲ್ಲ. ನೀವು ಸಹ ನಂಬರ್ ವಾರ್ ಪುರುಷಾರ್ಥ ಅನುಸಾರ ಜ್ಞಾನ ಮಾನಸ ಸರೋವರ ಆಗಿದ್ದೀರಿ. ಕೆಲವರು ದೊಡ್ಡ ನದಿ ಆಗಿದ್ದಾರೆ ಕೆಲವರು ನೀರಿನ ಕಾಲುವೆ ಆಗಿದ್ದಾರೆ, ಕೆಲವರು ಕೊಳ ಆಗಿದ್ದಾರೆ. ಈ ತಂದೆ ಎಲ್ಲವನ್ನು ಕುಳಿತು ತಿಳಿಸಿಕೊಡುತ್ತಾರೆ. ಮಕ್ಕಳಿಗೆ ಗೊತ್ತಿದೆ ನಾವು ಬ್ರಹ್ಮಾಕುಮಾರ ಹಾಗು ಬ್ರಹ್ಮಾಕುಮಾರಿಯರು ಆಗಿದ್ದೇವೆ. ಬ್ರಹ್ಮಾರವರ ತಂದೆ ಆಗಿದ್ದಾರೆ ಶಿವ. ನಾವೀಗ ಶಿವ ತಂದೆಗೆ ಮೊಮ್ಮಕ್ಕಳು ಆಗಿದ್ದೇವೆ. ನಾವೆಲ್ಲರು ಶಿವ ತಂದೆಗೆ ಮಕ್ಕಳಾಗಿದ್ದೇವೆ, ಆದರೆ ಈಗ ಅವರು ಈ ಶರೀರದಲ್ಲಿ ಬಂದಿದ್ದಾರೆ. ಅವರು ನಿರಾಕಾರನಾಗಿರುವ ಕಾರಣ ನಾವು ಅವರಿಗೆ ಮೊಮ್ಮಕ್ಕಳಾಗಿದ್ದು ಬ್ರಹ್ಮಾ ತಂದೆಗೆ ಮಕ್ಕಳಾಗಿದ್ದೇವೆ. ಆದುದರಿಂದ ನಾವು ಸಹೋದರ-ಸಹೋದರಿಯರಾಗಬೇಕು. ತಾತನಿಂದ ಎಲ್ಲರಿಗೂ ಆಸ್ತಿ ಸಿಗುತ್ತದೆ. ಈ ರೀತಿ ನಿಶ್ಚಯ ಇರುವವರು ಇಲ್ಲಿ ಕುಳಿತಿದ್ದೀರಿ, ನಾವು ಬ್ರಹ್ಮಾಕುಮಾರ-ಕುಮಾರಿಯರೆಂದು ನಿಮಗೆ ಗೊತ್ತಿದೆ. ಶಿವ ತಂದೆ ನಮ್ಮ ತಾತ ಆಗಿದ್ದಾರೆ. ಇಂತಹ ನಿಶ್ಚಯವುಳ್ಳವರಿಗೆ ಈಶ್ವರ ಸಂತಾನರೆಂದು ಕರೆಯಲಾಗುತ್ತದೆ. ನಾವು ಈಶ್ವರೀಯ ಕುಲದವರಾಗಿದ್ದೇವೆಂದು ನೀವು ಹೇಳುವಿರಿ. ಈಶ್ವರನಿಂದ ಆಸ್ತಿ ಪಡೆಯುತ್ತಿದ್ದೇವೆ. ಸಹೋದರ-ಸಹೋದರಿಯಾಗಿರುವ ಕಾರಣ ನಾವು ವಿಕಾರದಲ್ಲಿ ಹೋಗಲು ಸಾಧ್ಯವಿಲ್ಲ. ಒಂದುವೇಳೆ ವಿಕಾರಿಗಳಾದರೆ ಅದನ್ನು ಕುದೃಷ್ಟಿ ಎಂದು ಕರೆಯಲಾಗುತ್ತದೆ. ಅವರನ್ನು ಅತಿ ಕನಿಷ್ಟರೆಂದು ಕರೆಯಲಾಗುತ್ತದೆ. ಆದುದರಿಂದ ತಂದೆ ಹೇಳುತ್ತಾರೆ-ಮಕ್ಕಳೇ ಎಚ್ಚರಿಕೆಯಾಗಿರಿ. ಸಹೋದರ-ಸಹೋದರಿ ಎಂದು ಹೇಳುಕೊಂಡು ಒಂದುವೇಳೆ ವಿಕಾರಿದಲ್ಲಿ ಹೋದರೆ ತುಂಬಾ ಕಠಿಣ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ. ಸದ್ಗುರು ತಂದೆಯ ನಿಂದಕರು ಉಳಿಯುವುದೇ ಇಲ್ಲ. ಗುರು ಜನರು ಬಹಳ ಇದ್ದಾರೆ. ಆದರೆ ಇಲ್ಲಿ ಒಮ್ಮೆಯೇ ಸದ್ಗುರು ಸಿಗುತ್ತಾರೆ. ಇವರು ಬೇಹದ್ದಿನ ತಂದೆ ಆಗಿದ್ದಾರೆ. ನಂತರ ಸತ್ಯಯುಗದಲ್ಲಿ ದೈವೀ ತಂದೆಯರು ಸಿಗುತ್ತಾರೆ. ಈ ಸಮಯದಲ್ಲಿ ಅಸುರೀ ತಂದೆಯರು ಆಗಿದ್ದಾರೆ. ಈಗ ಸಂಗಮದಲ್ಲಿ ನೀವು ಈಶ್ವರ ತಂದೆಗೆ ಮಕ್ಕಳಾಗಿದ್ದೀರಿ. ಶಿವ ತಂದೆಯು ಬ್ರಹ್ಮಾ ತಂದೆಯ ಮುಖಾಂತರ ಓದಿಸುತ್ತಿದ್ದಾರೆ. ನಮಗೆ ಪರಮಾತ್ಮನೇ ಜ್ಞಾನ ಕೊಟ್ಟರೆಂದು ಹೇಳುತ್ತಾರೆ. ಮಮ್ಮಾ ವಿದ್ಯಾಧಿ ದೇವತೆ ಆಗಿದ್ದಾರೆ. ನಾವು ವಿದ್ಯಾಧಿ ದೇವತೆಯಾಗಿದ್ದೇವೆ ಎಂದು ಅವಶ್ಯಕವಾಗಿ ಮಕ್ಕಳು ಸಹ ಹೇಳುತ್ತಾರೆ. ತಂದೆ ತಾಯಿ

ಸೃಷ್ಟಿಚಕ್ರದ ಜ್ಞಾನವನ್ನು ಹೇಳುತ್ತಿದ್ದಾರೆ. ಬ್ರಹ್ಮಾರವರಿಗೆ ಪರಮಾತ್ಮನೆಂದು ಕರೆಯಲಾಗುವುದಿಲ್ಲ. ಪರಮಾತ್ಮ ಒಬ್ಬರೇ ಆಗಿದ್ದಾರೆ, ಉಳಿದಂತೆ ನಾವೆಲ್ಲರು ಅವರ ಮಕ್ಕಳಾಗಿದ್ದೇವೆ. ಬ್ರಹ್ಮಾ ಹಾಗೂ ಬ್ರಹ್ಮಾಕುಮಾರ ಕುಮಾರಿಯರು. ಈಗ ಈ ದೇವತೆ (ಬ್ರಹ್ಮಾ) ಗುಪ್ತವಾಗಿದ್ದಾರೆ ಹಾಗು ಮಮ್ಮಾ ವಿದ್ಯಾಧಿ ದೇವತೆ ಪ್ರತ್ಯಕ್ಷವಾಗಿದ್ದಾರೆ. ವಾಸ್ತವವಾಗಿ ನೀವು ಬ್ರಹ್ಮಾರವರ ಮಕ್ಕಳಾದರಲ್ಲವೆ. ಅವರಿಗೆ ಜ್ಞಾನ ದೇವತೆ ಎಂದು ಕರೆಯಲಾಗುತ್ತದೆ. ಅವರಿಗೆ ಶಿವನಿಂದ ಈ ಜ್ಞಾನ ದೊರಕಿತು. ಆದರೂ ಸಹ ಬ್ರಹ್ಮಾರವರಿಗೆ ಗಾಢ್ ಎಂದು ಹೇಳುವುದಿಲ್ಲ. ದೇವರು ಒಬ್ಬರೇ ಆಗಿದ್ದಾರೆ. ನೀವು ಈಗ ತಿಳಿದುಕೊಂಡಿದ್ದೀರಿ-ಕಲ್ಪದ ಹಿಂದೆ ಸಹ ಅಗತ್ಯವಾಗಿ ಪರಮಪಿತ ಬ್ರಹ್ಮಾರವರ ಮುಖಾಂತರ ಸೃಷ್ಟಿಯನ್ನು ರಚಿಸಿರಬೇಕು, ಅಂದಾಗ ಮೊಟ್ಟ ಮೊದಲು ಬ್ರಾಹ್ಮಣರೇ ಇರಬೇಕಾಗುತ್ತದೆ. ಅನೇಕ ವರ್ಷಗಳವರಿಗೆ ಯಜ್ಞ ನಡೆಯವಂತಹ ಬೇರೆ ಯಾವ ಯಜ್ಞಗಳು ಇಲ್ಲ. ಹೆಚ್ಚೆಂದರೆ ಯಜ್ಞಗಳನ್ನು ಏಳು ದಿನಗಳವರೆಗೆ ಮಾಡುತ್ತಾರಷ್ಟೆ. ಈ ಯಜ್ಞಕ್ಕೆ ಅವಿನಾಶಿ ಯಜ್ಞ ಅರ್ಥಾತ್ ಬಹಳ ಸಮಯ ನಡೆಯುವಂತಹ ರುದ್ರ ಜ್ಞಾನ ಯಜ್ಞವೆಂದು ಕರೆಯುತ್ತಾರೆ. ಇದು ಎಷ್ಟು ಸಮಯದವರೆಗೆ ನಡೆಯುತ್ತದೆ ಎಂದು ಯಾರು ತಿಳಿದುಕೊಂಡಿಲ್ಲ. ಅಂತ್ಯದವರೆಗೂ ನಡೆಯಲೇಬೇಕು. ಈ ಯಜ್ಞದಲ್ಲಿ ಹಳೆಯ ಪ್ರಪಂಚದ ಎಲ್ಲಾ ಸಾಮಾಗ್ರಿಗಳು ಸ್ವಾಹಾ ಆಗಲಿದೆ, ಆದರೆ ಇಂತಹ ರುದ್ರ ಜ್ಞಾನ ಯಜ್ಞವನ್ನು ಯಾವ ಮನುಷ್ಯರೂ ರಚನೆ ಮಾಡಲು ಸಾಧ್ಯವಿಲ್ಲ. ನಂತರ ಭಕ್ತಿಮಾರ್ಗದಲ್ಲಿ ಈ ಯಜ್ಞದ ಹೆಸರಿನಿಂದ ಚಿಕ್ಕ-ಚಿಕ್ಕ ಯಜ್ಞಗಳನ್ನು ರಚನೆ ಮಾಡುತ್ತಾರೆ. ಕೆಲವರು ರುದ್ರ ಯಜ್ಞವೆಂದು ಹೇಳುತ್ತಾರೆ. ರುದ್ರ ಜ್ಞಾನ ಯಜ್ಞವನ್ನು ರಚಿಸಿದರೆ ಅಲ್ಲಿ ಗೀತೆ ಅಥವಾ ವೇದ ಮೊದಲಾಗುವುದನ್ನು ಹೇಳುತ್ತಾರೆ. ರುದ್ರನೇ ಗೀತೆಯನ್ನು ಉಚ್ಚರಿಸುತ್ತಾರೆ, ಆದರೆ ಇದನ್ನು ಮರೆತು ಹೋಗಿರುವ ಕಾರಣ ಕೃಷ್ಣ ಹೆಸರನ್ನು ಹೇಳಿ ಬಿಡುತ್ತಾರೆ. ರುದ್ರ ಜ್ಞಾನ ಯಜ್ಞದಿಂದ ಸೂರ್ಯವಂಶೀ-ಚಂದ್ರವಂಶೀ ರಾಜಧಾನಿ ಸ್ಥಾಪನೆ ಮಾಡಿದರೆಂದು ಯಾರಿಗೂ ಗೊತ್ತಿಲ್ಲ.

ಈಗ ನೀವು ಸಮ್ಮುಖದಲ್ಲಿ ಕುಳಿತುಕೊಂಡಿದ್ದೀರಿ. ನಿಮಗೆ ಈಗ ಶಿವ ತಂದೆ, ಬ್ರಹ್ಮಾ ತಂದೆಯ ನೆನಪಿರುತ್ತದೆ. ಆ ಬ್ರಾಹ್ಮಣರು ನಾವು ಬ್ರಹ್ಮನ ವಂಶದವರೆಂದು ಹೇಳಿಕೊಳ್ಳುತ್ತಾರೆ. ದೇವತೆಗಳ ವಂಶದವರು ದೇವತೆಗಳಾಗಿರುತ್ತಾರೆ. ಕ್ಷತ್ರಿಯ ವಂಶದವರು ಕ್ಷತ್ರಿಯರಾಗಿರುತ್ತಾರೆ. ವರ್ಣಗಳಂತೂ ಇದೆಯಲ್ಲವೆ. ಇವುಗಳನ್ನು ಯಾರೂ ತಿಳಿದುಕೊಂಡಿಲ್ಲ. ನೀವು ಯಾರಿಗಾದರು ತಿಳಿಸಿಕೊಡುವಾಗ ನೀವು ಸಹ ಬ್ರಹ್ಮಾಕುಮಾರ-ಕುಮಾರಿಯರಾಗಿರುವಿರಿ ಎಂದು ಹೇಳಬೇಕು. ಪ್ರಜಾಪಿತನ ಹೆಸರಿದೆಯಲ್ಲವೆ. ಯಾರು ಹಿಂದೆ ಜೀವನ ಮಾಡಿ ಹೋಗಿದ್ದಾರೆ ಪುನಃ ವರ್ತಮಾನ ದಲ್ಲಿ ಇರಬೇಕಲ್ಲವೆ. ಪರಮಪಿತ ಪರಮಾತ್ಮ ಬ್ರಹ್ಮಾರವರ ಮುಖ ಕಮಲದಿಂದ ಬ್ರಾಹ್ಮಣ ಹಾಗೂ ಸೂರ್ಯವಂಶಿ, ಚಂದ್ರವಂಶೀ ಧರ್ಮದ ಸ್ಥಾಪನೆ ಮಾಡುತ್ತಾರೆಂಬ ಗಾಯನವಿದೆ. ಇಲ್ಲವೆಂದರೆ ನೀವು ಈ ರೀತಿ ಕೇಳಬಹುದು ಪ್ರಜಾಪಿತ ಬ್ರಹ್ಮಾ ಇಲ್ಲಿ ಇದ್ದವರು ಎಲ್ಲಿ ಹೋದರು. ಸೃಷ್ಟಿಯನ್ನು ರಚಿಸುವಾಗ ಮೊಟ್ಟ-ಮೊದಲಿಗೆ ಬ್ರಹ್ಮಾಮುಖವಂಶಾವಳಿ ಬ್ರಾಹ್ಮಣರು ಇರಬೇಕು. ನಾವು ಬ್ರಹ್ಮಾಮುಖವಂಶಾವಳಿ ಬ್ರಾಹ್ಮಣರೆಂದು ನೀವು ತಿಳಿದುಕೊಂಡಿದ್ದೀರಿ. ಮಮ್ಮಾ ಬಾಬಾ ಎಂದು ಹೇಳುತ್ತಾ ಪತ್ರ ಬರೆಯುತ್ತೀರಿ. ಬೋರ್ಡ್ ಸಹ ಬರೆಯಲ್ಪಟ್ಟಿದೆ. ಈ ಶಿವ ತಂದೆಯು ನಿಮಗೆ ಏನು ಆಗಬೇಕು? ಎಂದು ನೀವು ತಿಳಿಸಿಕೊಡುತ್ತೀರಿ, ಆಗ ಅವರು ಸರ್ವವ್ಯಾಪಿ ಎಂದು ಹೇಳಲಾಗುವುದಿಲ್ಲ. ತಂದೆಗೆ ಸರ್ವವ್ಯಾಪಿ ಎಂದು ಹೇಳಲಾಗುತ್ತದೆಯೇ? ಒಳ್ಳೆಯದು. ಬ್ರಹ್ಮಾ ತಂದೆಗೂ ನಿಮಗು ಸಂಬಂಧವೇನು?ಅವಶ್ಯಕವಾಗಿ ಅವರು ಹಿಂದೆ ಆಗಿ ಹೋಗಿರುವ ಕಾರಣ ಅವರ ಜ್ಞಾಪಾಕಾರ್ಥವನ್ನು ಮಾಡಲ್ಪಟ್ಟಿದೆ. ಈಗ ಪುನಃರಚನೆಯನ್ನು ರಚಿಸುತ್ತಿದ್ದಾರೆ. ಆದುದರಿಂದ ಬ್ರಹ್ಮಾ ನಮ್ಮ ತಂದೆಯಾಗಿದ್ದಾರೆ. ಪರಮಪಿತ ಪರಮಾತ್ಮ ಬ್ರಹ್ಮಾ ಮುಖ ಕಮಲದಿಂದ ಓದಿಸುತ್ತಿದ್ದಾರೆ. ನಾವು ಅವರ ಮೂಲಕ ರಾಜಯೋಗ ಕಲಿಯುತ್ತೇವೆ. ನೀವು ಸಹ ಕಲಿತುಕೊಂಡಾಗ 21 ಜನ್ಮಗಳಿಗೆ ತಂದೆಯಿಂದ ಆಸ್ತಿಯನ್ನು ಪಡೆಯುತ್ತೀರಿ, ಇಲ್ಲವೆಂದರೆ ಪಡೆಯಲಾಗುವುದಿಲ್ಲ. ಕೋಟಿಯಲ್ಲಿ ಕೆಲವರು ಬಂದು ಜ್ಞಾನ ಕೇಳುತ್ತಾರೆ. ಯಾರು ಐದು ಸಾವಿರ ವರ್ಷದ ಹಿಂದೆ ಬ್ರಹ್ಮನ ವಂಶದವರಾಗಿದ್ದರು ಅವರೇ ಈಗಲೂ ಆಗಬೇಕಾಗುತ್ತದೆ. ಈಗ ಇನ್ನು ಆಗದಿರಬಹುದು ಆದರೆ ಪುನಃ ಆಗುತ್ತಾರೆ. ಪತಿತರಿಂದ ಪಾವನ, ಮನುಷ್ಯರಿಂದ ದೇವತೆಗಳನ್ನಾಗಿ ಮಾಡಲು ತಂದೆ ಬಂದಿದ್ದಾರೆ. ಆಗ ಬ್ರಹ್ಮಾರವರು ಸಹ ಬೇಕಾಗುತ್ತದೆ. ನಾವು ಬ್ರಹ್ಮಾಕುಮಾರ ಕುಮಾರಿಯರು ಈಗ ಈಶ್ವರಿನ ವಂಶದವರಾಗಿದ್ದೇವೆ. ಯಜ್ಞ ರಚನೆಯಾಗಿದೆ ಅವಶ್ಯಕವಾಗಿ ಬ್ರಾಹ್ಮಣರು ಬೇಕಾಗುತ್ತದೆ. ಬ್ರಾಹ್ಮಣರಿಗೆ ಶಿಖೆ ಇದೆಯಲ್ಲವೆ. ಆದರೆ ನೀವು ಬಹುಶಃ ಸದಾ ಸುಖವನ್ನು ಪಡೆದವರಾದ ಕಾರಣ ಒಪ್ಪಿಕೊಳ್ಳುತ್ತಿಲ್ಲ. ಇಷ್ಟೊಂದು ಜನ ಬ್ರಹ್ಮಾಕುಮಾರ ಕುಮಾರಿ ಯರಿದ್ದಾರೆ ವೃದ್ಧಿಯಾಗುತ್ತಾ ಹೋಗುತ್ತದೆ. ಈಗ ನೀವು ಬಾಪ್ದಾದಾರವರ ನೆನಪಿನಲ್ಲಿ, ಪರಮಾತ್ಮನ ಸಮ್ಮುಖದಲ್ಲಿ ಕುಳಿತುಕೊಂಡಿದ್ದೀರಿ. ಇದನ್ನು ಸರ್ವವ್ಯಾಪಿಯೆಂದು ಹೇಳಲಾಗುತ್ತದೆ. ಮಾಲಿಕ ಈಗ ನಮ್ಮ ಮುಂದೆ ಪ್ರತ್ಯಕ್ಷವಾಗಿದ್ದಾರೆ. ಏನು ಮಾಡುತ್ತಿದ್ದಾರೆ? ಅವಶ್ಯವಾಗಿ ಕರ್ಮ ಮಾಡುತ್ತಿರಬೇಕು. ಸನ್ಮುಖದಲ್ಲಿ ಕರ್ಮ, ಅಕರ್ಮ, ವಿಕರ್ಮದ ರಹಸ್ಯ ತಿಳಿಸುತ್ತಿದ್ದಾರೆ. ಪರಮಾತ್ಮ ಮನುಷ್ಯ ಸೃಷ್ಟಿಯ ಬೀಜರೂಪ ಆಗಿದ್ದಾರೆ, ಅವರಲ್ಲಿ ಇಡೀ ಸೃಷ್ಟಿಯ ಆದಿ-ಮಧ್ಯ -ಅಂತ್ಯದ ಜ್ಞಾನವಿದೆ. ಅವರು ನಾಲೆಜ್ಫುಲ್ ಆಗಿದ್ದಾರೆ. ನಾಲೆಜ್ಫುಲ್ ಅಂದರೆ ಎಲ್ಲಾ ಮನುಷ್ಯರ ಬುದ್ಧಿಯಲ್ಲಿರುವುದನ್ನು ತಿಳಿದಿರುವವರೆಂಬ ಅರ್ಥವಲ್ಲ. ತಂದೆ ತಿಳಿಸುತ್ತಾರೆ-ನಾನು ಬಂದು ಮಕ್ಕಳಿಗೆ ರಾಜಯೋಗ ಹಾಗೂ ಜ್ಞಾನ ಕಲಿಸುತ್ತೇನೆ, ಈ ಯೋಗದಿಂದ ನೀವು ಪಾವನರಾಗಿ ಬಿಡುತ್ತೀರಿ ಹಾಗು ಈ ಸೃಷ್ಟಿಚಕ್ರದ ಜ್ಞಾನವನ್ನು ಅರಿಯುವ ಕಾರಣ ಪವಿತ್ರತೆಯ ಕಿರೀಟ ಮತ್ತು ರತ್ನಜಡಿತ ಕಿರೀಟ ಪ್ರಾಪ್ತಿಯಾಗುತ್ತದೆ, ಇದನ್ನು ಅವಿನಾಶಿ ಜ್ಞಾನರತ್ನವೆಂದು ಕರೆಯುತ್ತಾರೆ. ಯೋಗದಿಂದ ಆರೋಗ್ಯ, ಜ್ಞಾನದಿಂದ ಐಶ್ವರ್ಯ ಸಿಗುತ್ತದೆ. ಆರೋಗ್ಯ-ಐಶ್ವರ್ಯ ಇದ್ದರೆ ಸಂತೋಷವೂ ಸಹ ಇರುತ್ತದೆ. ನಿಮಗೆ ಹೆಲ್ತ್ (ಆರೋಗ್ಯ), ವೆಲ್ತ್(ಐಶ್ವರ್ಯ), ಹ್ಯಾಪಿ (ಸಂತೋಷ) ಎಲ್ಲವೂ ಪ್ರಾಪ್ತಿ ಆಗುತ್ತದೆ. ಯೋಗದಿಂದ ವಿಕರ್ಮ

ವಿನಾಶವಾಗಿ ಪ್ರಕಾಶದ ಕಿರೀಟ ಸಿಗುತ್ತದೆ. ದೇವತೆಗಳು ಸದಾ ಆರೋಗ್ಯ ಹಾಗು ಶ್ರೀಮಂತರಾಗಿರುತ್ತಾರೆ. ಸ್ವದರ್ಶನ ಚಕ್ರವರ್ತಿಗಳಾಗಿ ಜ್ಞಾನ ಧಾರಣೆ ಮಾಡುವುದರಿಂದ ಶ್ರೀಮಂತರಾಗಿ ಬಿಡುತ್ತೀರಿ. ಇದನ್ನು ನೇಚರ್ ಕ್ಯೂರ್ ಎಂದು ಕರೆಯಲಾಗುತ್ತದೆ. ಆತ್ಮ ಪವಿತ್ರವಾದ ನಂತರ ಪವಿತ್ರ ಶರೀರ ಸಿಗುತ್ತದೆ. ಇವರಿಗೆ ದೇವತೆಯೆಂದು ಕರೆಯಲಾಗುತ್ತದೆ. ಪವಿತ್ರತೆ ಇದ್ದಾಗ ಆರೋಗ್ಯ ಐಶ್ವರ್ಯವೂ ಇರುತ್ತದೆ. ಸತ್ಯಯುಗದಲ್ಲಿ ಭಾರತವಾಸಿಗಳ ಆಯಸ್ಸು ನೂರೈವತ್ತು ವರ್ಷ ಆಯಸ್ಸಿತ್ತು. ಈಗಂತು ಭೋಗಿಗಳಾಗಿ ಬಿಟ್ಟಿದ್ದಾರೆ, ಆದುದ ರಿಂದ ಅಕಾಲಮೃತ್ಯು ಆಗುತ್ತದೆ. ಅದಾಗಿದೆ ಪವಿತ್ರ ಜಗತ್ತು, ಇದಾಗಿದೆ ಅಪವಿತ್ರ ಜಗತ್ತು.

ಯಾವಾಗ ಧರ್ಮ ಗ್ಲಾನಿಯಾಗುತ್ತದೆ ಆಗ ನಾನು ಬರುತ್ತೇನೆಂದು ತಂದೆ ತಿಳಿಸುತ್ತಾರೆ. ತಮ್ಮ ಪೂಜ್ಯರ ನಿಂದನೆ ಭಾರತದಲ್ಲಿಯೇ ನಡೆಯುತ್ತದೆ. ಯದಾ-ಯದಾಹಿ ಧರ್ಮಸ್ಯಾ. . . . . ಇದು ಭಾರತದ ಮಾತಾಗಿದೆ. ತಂದೆ ಕುಳಿತು ತಿಳಿಸುತ್ತಾರೆ ಮಾಯೆ ನಿಮ್ಮನ್ನು ಸಂಪೂರ್ಣವಾಗಿ ಕುಪುತ್ರರನ್ನಾಗಿ ಮಾಡಿ ಬಿಟ್ಟಿದೆ. ಕುಪುತ್ರರೆಂದು ಭ್ರಷ್ಟಾಚಾರಿಗಳಿಗೆ ಕರೆಯಲಾಗುತ್ತದೆ. ನಂತರ ಶ್ರೇಷ್ಟಾಚಾರಿಗಳನ್ನಾಗಿ ಯಾರು ಮಾಡುತ್ತಾರೆ? ಹೊಸ ಪ್ರಪಂಚ ಶ್ರೇಷ್ಠಚಾರಿಯಾಗಿದೆ. ಹೊಸ ಪ್ರಪಂಚದಿಂದ ಅವಶ್ಯಕವಾಗಿ ಹಳೆಯಪ್ರಪಂಚ ಆಗುತ್ತದೆ. ಹಳೆಯ ವಸ್ತು ಅಗತ್ಯವಾಗಿ ನಿಸ್ಸಾರವಾಗಿರುತ್ತದೆ. ಪ್ರತಿಯೊಂದು ವಸ್ತು ನಿಸ್ಸಾರವಾಗುತ್ತದೆ. ಎಲ್ಲವು ವಿನಾಶವಾಗಿ ಬಿಡುತ್ತದೆ. ಈ ಹಳೆಯ ಶರೀರವನ್ನು ನೀವು ಪಾಲನೆ ಮಾಡಬೇಕು ಹಾಗು ಜೊತೆ-ಜೊತೆಯಲ್ಲಿ ಓದಬೇಕು. ಬಹಳ ಮಕ್ಕಳು ಗೃಹಸ್ಥ ವ್ಯವಹಾರದಲ್ಲಿದ್ದು ನೌಕರಿ ಮೊದಲಾಗುವುದನ್ನು ಮಾಡುತ್ತಾ ಶ್ರೇಷ್ಠ ಪದವಿಯನ್ನು ಪಡೆಯಲು ಪೂರ್ತಿ ಶ್ರೀಮತದಂತೆ ನಡೆಯುತ್ತಾರೆ. ಒಂದುವೇಳೆ ತಂದೆಗೆ ಗೊತ್ತಾದಾಗ-ಇಂತಹ ಪರಿಸ್ಥಿತಿಯಲ್ಲಿ ಈ ರೀತಿ ಮಾಡಿ ಎಂದು ಮಾರ್ಗದರ್ಶನ ಕೊಡುತ್ತಾರೆ. ಮಕ್ಕಳು ಸಹ ಈ ರೀತಿ ತಿಳಿಸುತ್ತಾರೆ-ಬಾಬಾ ನಮ್ಮ ಬಳಿ ಇವೆಲ್ಲವೂ ಇದೆ. ಆಗ ಬಾಬಾ ಒಳ್ಳೆಯದು ಸೇವಾಕೇಂದ್ರಗಳನ್ನು ತೆರೆಯಿರಿ ಎಂದು ಹೇಳುತ್ತಾರೆ, ಈ ಸೇವೆಯಿಂದ ಅನೇಕರ ಕಲ್ಯಾಣವಾಗಿ ಬಿಡುತ್ತದೆ. ತಮ್ಮ ಮನೆಯ ಒಂದು ಕಟ್ಟಡಿಯಲ್ಲಿ ಜ್ಞಾನ ತಿಳಿಸುವ ಸೇವೆಗಾಗಿ ಮಾಡಿಕೊಳ್ಳಿರಿ. ಆಸ್ತಿಯು ನಿಮ್ಮದೇ ಆಗಿರುತ್ತದೆ, ಕೇವಲ ಸೇವಾರ್ಥವಾಗಿ ಕೊಡಿ. ಬೇಕಾದರೆ ಬಾಡಿಗೆಯನ್ನು ಪಡೆದುಕೊಳ್ಳಿ. ಬಾಡಿಗೆಧಾರನಿಗೆ ಎಂದಿಗೂ ಮಾಲಿಕನೆಂದು ಹೇಳುವುದಿಲ್ಲ. ಈ ರೀತಿ ಸೇವಾಕೇಂದ್ರಗಳನ್ನು ತೆರೆಯುತ್ತಾ ಹೋಗಿ. ಮೊದಲಿಗೆ ಸೇವಾಕೇಂದ್ರವನ್ನು ತಯಾರು ಮಾಡಿ, ಒಂದು ವೇಳೆ ಏನಾದರು ಉಳಿದರೆ ತಂದೆಗೆ ಸಹಯೋಗ ಕೊಡಬಹುದು. ಸೇವಾ ಕೇಂದ್ರದ ಪಾಲನೆ ಮಾಡುವುದರಿಂದಲೇ ನಿಮ್ಮ ಭವಿಷ್ಯವಾಗುತ್ತದೆ. ಹೆಚ್ಚಾಗಿದೆ ಅಂದರೆ ಸಫಲ ಮಾಡಿಕೊಳ್ಳಬೇಕು. ಇಲ್ಲವೆಂದರೆ ಎಲ್ಲವೂ ವಿನಾಶವಾಗಿ ಬಿಡುತ್ತದೆ. ಮನುಷ್ಯರು ದಾನ ಮಾಡುತ್ತಾರೆ, ಮತ್ತೊಂದು ಜನ್ಮದಲ್ಲಿ ಆ ಫಲ ಸಿಗುತ್ತದೆ. ಇಲ್ಲಿ ತಾವು ಈಶ್ವರನ ಸೇವಾರ್ಥವಾಗಿ ಮಾಡುವುದರಿಂದ ಇಪ್ಪತ್ತೊಂದು ಜನ್ಮಗಳಿಗೆ ಸಿಗುತ್ತದೆ. ಉಳಿದ ಹಾಗೆ ನೀವು ಮಕ್ಕಳು ಯಾರ ಸಾಲವನ್ನು ಇಟ್ಟುಕೊಳ್ಳಬಾರದು. ಸಾಲ ಅರ್ಥಾತ್ ಹೊರೆ ಆಗಿದೆ. ಸಾಲ ಇದ್ದರೆ ತುಂಬಾ ಚಿಂತೆ ಇರುತ್ತದೆ. ಸಾಲವನ್ನು ಹಿಂತಿರುಗಿ ಕೊಡದೆಯಿದ್ದಾಗ ಗೌರವ ಹೋಗುತ್ತದೆ. ಮನುಷ್ಯ ಹೆಚ್ಚು ಸಾಲ ಮಾಡಿತ್ತಿರುತ್ತಾನೆ. ವಿವಾಹಗಳಿಗೆ, ತೀರ್ಥ ಯಾತ್ರೆಗೆಂದು ತುಂಬಾ ಸಾಲ ಮಾಡುತ್ತಾರೆ. ಹೊಟ್ಟೆ ಪಾಡಿಗೆ ಹೆಚ್ಚು ಖರ್ಚು ಆಗುವುದಿಲ್ಲ, ವ್ಯರ್ಥ ಖರ್ಚು ಮಾಡುತ್ತಿರುತ್ತಾರೆ. ವಿವಾಹ ಮಾಡುವುದು ಎಂದರೆ ದಿವಾಳಿ ಆಗುವುದಾಗಿದೆ. ಬಡವರು ಸ್ವಲ್ಪ ಹಣದಲ್ಲಿಯೇ ಮಾಡಿ ಮುಗಿಸುತ್ತಾರೆ. ನೀವು ತಂದೆಯಿಂದ ಸಲಹೆಯನ್ನು ತೆಗೆದುಕೊಳ್ಳುತ್ತಾರೆ. ಯಾವುದೇ ದುಷ್ಟ ಚಟಗಳು, ತುಂಬಾ ಚಹ ಕುಡಿಯುವುದು, ಸಿಗರೇಟ್..... ಈ ರೀತಿ ಅಭ್ಯಾಸಗಳಿರಬಾರದು. ಶ್ರೀಮತದಂತೆ ನಡೆಯಬೇಕು. ಮನುಷ್ಯರು ಹಣ ಕೂಡಿಡುರುತ್ತಾರೆ. ಇದು ನಿಮ್ಮ ನಂಬರ್ ವನ್ ಬ್ಯಾಂಕಾಗಿದೆ. ಇದರಲ್ಲಿ ನಾಲ್ಕಾಣೆಯ ಸಹಯೋಗ ಕೊಟ್ಟಾಗ ಭವಿಷ್ಯದಲ್ಲಿ ಅದೇ ವಜ್ರವಾಗಿ ಬಿಡುತ್ತದೆ. ಕಲ್ಲಿನಿಂದ ಚಿನ್ನವಾಗಿ ಬಿಡುತ್ತದೆ. ನಿಮ್ಮ ಪ್ರತಿಯೊಂದು ವಸ್ತುವನ್ನು ಪಾರಸ ಮಾಡಿ ಬಿಡುತ್ತಾರೆ. ಶಿವ ತಂದೆಯ ಭಂಡಾರ ಸದಾ ತುಂಬಿರುತ್ತದೆ. ಬಹಳ ಮಕ್ಕಳಿರುವಾಗ ಭಂಡಾರ ಹೇಗೆ ಖಾಲಿ ಆಗುತ್ತದೆ, ಇದು ಅಸಂಭವ ಮಾತಾಗಿದೆ. ವ್ಯರ್ಥವಾಗಿ ಯಾರಿಂದಲೂ ತೆಗೆದುಕೊಳ್ಳಬಾರದು. ಮಹಲ್ ಕಟ್ಟಬೇಕೇನು? ತಂದೆ ಕೊಡುವಂತಹ ದಾತ ಆಗಿದ್ದಾರೆ. ಸಫಲವಾಗುವುದಾದರೆ ತೆಗೆದುಕೊಳ್ಳುತ್ತಾರೆ, ಕೆಲಸಕ್ಕೆ ಬಾರದ ಅಥವಾ ಉಪಯೋಗ ಆಗದೇ ಇರುವುದನ್ನು ತಂದೆ ತೆಗೆದುಕೊಳ್ಳುವುದಿಲ್ಲ. ಒಂದುವೇಳೆ ತೆಗೆದುಕೊಂಡರೆ ಮರಳಿ ಕೊಡಬೇಕಾಗುತ್ತದೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾಪಿತಾ ಬಾಪ್ದಾದಾರವರ ನೆನಪು, ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಯಾವುದೇ ದುಶ್ಚಟಗಳನ್ನು ಇಟ್ಟುಕೊಳ್ಳಬಾರದು. ಶ್ರೀಮತದಂತೆ ತಮ್ಮ ಒಂದೊಂದು ಪೈಸೆ ಸಫಲ ಮಾಡಿಕೊಂಡು ಭವಿಷ್ಯಕ್ಕಾಗಿ ಜಮಾ ಮಾಡಿಕೊಳ್ಳಬೇಕು.

2. ಈಶ್ವರೀಯ ಕುಲದವರಾಗಿ ಯಾವುದೇ ಅಸುರೀ ಕರ್ಮ ಮಾಡಬಾರದಾಗಿದೆ. ಸದ್ಗುರು ನಿಂದಕರು ಎಂದೂ ಆಗಬಾರದು.

ವರದಾನ: ನನ್ನದನ್ನು ನಿನ್ನದರಲ್ಲಿ ಪರಿವರ್ತನೆ ಮಾಡುತ್ತಾ ಸರ್ವ ಆಕರ್ಷಣೆಗಳಿಂದ ಮುಕ್ತರಾಗುವಂತಹ ಡಬಲ್ ಲೈಟ್

ಭವ.

ಲೌಕಿಕ ಸಂಬಂಧಗಳಲ್ಲಿ ಸೇವೆಯನ್ನು ಮಾಡುತ್ತಾ ಸದಾ ಇದೇ ಸ್ಮೃತಿಯಿರಲಿ - ಇವರು ನನ್ನವರಲ್ಲ, ಎಲ್ಲರೂ ತಂದೆಯ ಮಕ್ಕಳು. ತಂದೆಯವರು ಇವರ ಸೇವಾರ್ಥವಾಗಿ ನಮ್ಮನ್ನು ನಿಮಿತ್ತ ಮಾಡಿದ್ದಾರೆ. ಮನೆಯಲ್ಲಿರುವುದಿಲ್ಲ ಆದರೆ ಸೇವಾಸ್ಥಾನದಲ್ಲಿ ಇರುತ್ತೇವೆ. ನನ್ನದೆಲ್ಲವೂ ನಿನ್ನದಾಯಿತು, ಶರೀರವೂ ನನ್ನದಲ್ಲ. ನನ್ನದರಲ್ಲಿಯೇ ಆಕರ್ಷಣೆಯಾಗುತ್ತದೆ. ಯಾವಾಗ ನನ್ನದು ಸಮಾಪ್ತಿಯಾಗುವುದೋ ಆಗ ಮನಸ್ಸು-ಬುದ್ಧಿಯು ಯಾವುದರ ಕಡೆಯೂ ಸೆಳೆಯಲು ಸಾಧ್ಯವಿಲ್ಲ. ಬ್ರಾಹ್ಮಣ ಜೀವನದಲ್ಲಿ ನನ್ನದನ್ನು ನಿನ್ನದರಲ್ಲಿ ಪರಿವರ್ತಿಸುವವರೇ ಡಬಲ್ ಲೈಟ್ ಆಗಿರಲು ಸಾಧ್ಯವಾಗುವುದು.

**ಸ್ಲೋಗನ್:** ವಿಘ್ನ ಮುಕ್ತರಾಗಲು ಆಶೀರ್ವಾದಗಳ ಖಜಾನೆಯನ್ನು ಜಮಾ ಮಾಡಿಕೊಳ್ಳಿರಿ.

ಲವಲೀನ ಸ್ಥಿತಿಯ ಅನುಭವ ಮಾಡಿರಿ:

ಯಾವುದೇ ಮಾತಿನ ವಿಸ್ತಾರದಲ್ಲಿ ಹೋಗದೆ, ಅದಕ್ಕೆ ಬಿಂದುವಿನ್ನಿಟ್ಟು ಬಿಂದುವಿನಲ್ಲಿ ಸಮಾವೇಶವಾಗಿರಿ, ಬಿಂದುವಾಗಿಬಿಡಿ. ಬಿಂದುವನ್ನಿಡಿ, ಬಿಂದುವಿನಲ್ಲಿ ಸಮಾವೇಶವಾಗುತ್ತೀರೆಂದರೆ ಸರ್ವ ವಿಸ್ತಾರ, ಜಾಲಗಳೆಲ್ಲವೂ ಸೆಕೆಂಡಿನಲ್ಲಿ ಸಮಾವೇಶವಾಗುವುದು ಮತ್ತು ಸಮಯವು ಉಳಿತಾಯವಾಗುವುದು, ಪರಿಶ್ರಮದಿಂದ ಮುಕ್ತರಾಗಿ ಬಿಡುತ್ತೀರಿ. ಬಿಂದುವಾಗಿ ಬಿಂದುವಿನಲ್ಲಿ ಲವಲೀನರಾಗುವಿರಿ. ಯಾವುದೇ ಕಾರ್ಯವನ್ನು ಮಾಡುತ್ತಾ ತಂದೆಯ ನೆನಪಿನಲ್ಲಿ ಲವಲೀನರಾಗಿರಿ.